Rotary ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD

# ಐಶ್ವರ್ಯ

ಸಂಪುಟ: 04 ಸಾಪ್ತಾಹಿಕ ಸಂಚಿಕೆ : 4
ದಿನಾಂಕ: 29.07.2025


Rtn. Francesco Arezzo
R.I. President


Rtn. K. Palaksha
District Governor


Rtn. Anil Kumar
President


Rtn. Krishnappa
Secretary

## ತಾಯಿ - ಮಗುವಿನ ಆರೋಗ್ಯ ತಪಾಸಣೆ ಮತ್ತು ಮಾಹಿತಿ ಕಾರ್ಯಕ್ರಮ



ರೋಟರಿ ಐಸಿರಿ ಪರ್ಕಳ, RCC ಐಸಿರಿ, ಪ್ರಾಥಮಿಕ ಆರೋಗ್ಯ ಕೇಂದ್ರ ಹಿರೆಬೆಟ್ಟು ಹಾಗೂ ಸರಕಾರಿ ಸಂಯುಕ್ತ ಪ್ರೌಢಶಾಲೆ (ಪ್ರಾಥಮಿಕ ವಿಭಾಗ) ಶೆಟ್ಟಿಬೆಟ್ಟು ಇವರ ಸಂಯುಕ್ತ ಆಶ್ರಯದಲ್ಲಿ ತಾಯಿ–ಮಗುವಿನ ಆರೋಗ್ಯ ತಪಾಸಣೆ ಮತ್ತು ಮಾಹಿತಿ ಕಾರ್ಯಕ್ರಮವು ಜುಲೈ 27, ಭಾನುವಾರದಂದು ಶಾಲಾ ಆವರಣದಲ್ಲಿ ಜರುಗಿತು. RCC ಐಸಿರಿ ಅಧ್ಯಕ್ಷೆ ಶ್ರೀಮತಿ ಲಕ್ಷ್ಮೀ ನಾಯ್ಕ್ ರವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮಕ್ಕೆ ರೋಟರಿ ಐಸಿರಿಯ ಅಧ್ಯಕ್ಷ ರೊ. ಅನಿಲ್ ಕುಮಾರ್ ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು. ವಲಯಸೇನಾನಿ ರೊ. ಸ್ಮಿತಾ ಜಿ. ಕಾಮತ್, ಕೆಎಂಸಿ ಮಣಿಪಾಲದ ವೈದ್ಯರುಗಳಾದ ಕಮ್ಯುನಿಟಿ ಮೆಡಿಸಿನ್ ವಿಭಾಗದ ಡಾ. ಯಶ್ ಅಲೋಕ್, ಮಕ್ಕಳಚಿಕಿತ್ಸಾ ತಜ್ಞ ಡಾ. ಸಾಯಿನಾಥ್ ಘಾಲಿ, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ರತ್ನಾ ಕೆ., ರೋಟರಿ ಐಸಿರಿಯ ಸಮುದಾಯ ಸೇವಾ ನಿರ್ದೇಶಕರಾದ ರೊ. ಕೆ. ಪ್ರಕಾಶ್ ಶೆಣೈ, RCC ಸಂಯೋಜಕರಾದ ರೊ. ಕೆ. ಪ್ರಭಾಕರ ಶೆಟ್ಟಿ, ಕಾರ್ಯದರ್ಶಿ ರೊ. ಕೃಷ್ಣಪ್ಪ, RCC ಐಸಿರಿ ಕಾರ್ಯದರ್ಶಿ ಶ್ರೀಮತಿ ಶಾರದಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕೆಎಂಸಿ ಮಣಿಪಾಲದ ನರ್ಸಿಂಗ್ ಕಾಲೇಜಿನ ಪ್ರಾಧ್ಯಾಪಕಿ ಡಾ. ಸುರೇಖಾ ಸಾಮಂತ್ ರವರು ಮಕ್ಕಳಿಗೆ ಮತ್ತು ತಾಯಂದಿರಿಗೆ ಸರಕಾರದಿಂದ ಪ್ರಯೋಜಿಸಲ್ಪಟ್ಟ ಯೋಜನೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದೊರೆಯುವ ಉಚಿತ ಸೌಲಭ್ಯಗಳು, ಮಕ್ಕಳ ಲಸಿಕೆಗಳು ಹಾಗೂ ಸಾಂಕ್ರಾಮಿಕ ರೋಗಗಳ ಬಗ್ಗೆ ವಿವರವಾದ ಮಾಹಿತಿ ನೀಡಿದರು.

ರೋಟರಿ ಜಿಲ್ಲಾ RCC ಉಪಸಭಾಪತಿ ರೊ. ಗುರುಪ್ರಸಾದ್ ಕಾಮತ್ ಕಾರ್ಯಕ್ರಮದ ನಿರೂಪಣೆ ಮಾಡಿದರು. ರೋಟರಿ ಐಸಿರಿಯ ಕಾರ್ಯದರ್ಶಿ ರೊ. ಕೃಷ್ಣಪ್ಪ ಧನ್ಯವಾದ ಸಮರ್ಪಿಸಿದರು. ಈ ಚುಟುಕಾದ ಸಭಾ ಕಾರ್ಯಕ್ರಮದ ಬಳಿಕ ಮಕ್ಕಳ ಆರೋಗ್ಯ ತಪಾಸಣೆ ನಡೆಯಿತು. ಆಶಾ ಕಾರ್ಯಕರ್ತೆಯರು ಕಾರ್ಯಕ್ರಮಕ್ಕೆ ಸಹಕಾರ ನೀಡಿದರು.

## ರೋಟರಿ ಐಸಿರಿ ವನಮಹೋತ್ಸವ







ಜುಲೈ 27, ಭಾನುವಾರದಂದು ಶೆಟ್ಟಿಬೆಟ್ಟು ಸರಕಾರಿ ಸಂಯುಕ್ತ ಪ್ರೌಢಶಾಲೆ ಆವರಣದಲ್ಲಿ ನಡೆದ ವನಮಹೋತ್ಸವ ಕಾರ್ಯಕ್ರಮದ ಚಿತ್ರಗಳು.

*(ವರದಿ ಮುಂದಿನ ಪುಟದಲ್ಲಿ)*

## ಆರೋಗ್ಯದ ಮೇಲೆ ಚಿಂತನೆಗಳ ಪರಿಣಾಮ




ಜೆಸಿಐ ರಾಷ್ಟ್ರೀಯ ತರಬೇತುದಾರ, ಸೆನೆಟರ್ ರೊ. ರಾಜೇಶ್ ಡಿ. ಶೆಣೈಯವರು ಜುಲೈ 27 ರಂದು ಶೆಟ್ಟಿಬೆಟ್ಟು ಶಾಲಾವರಣದಲ್ಲಿ ನಡೆದ ತಾಯಿ–ಮಗುವಿನ ಆರೋಗ್ಯ ತಪಾಸಣೆ ಮತ್ತು ಮಾಹಿತಿ ಕಾರ್ಯಕ್ರಮದಲ್ಲಿ, ಅರೋಗ್ಯ ರಕ್ಷಣೆಯಲ್ಲಿ ಮನಸ್ಸಿನ ಚಿಂತನೆಗಳು ಹೇಗೆ ಪರಿಣಾಮ ಬೀರುತ್ತವೆ. ಸಕಾರಾತ್ಮಕ ಚಿಂತನೆಗಳಿಂದ ಸಕಾರಾತ್ಮಕ ವಾಕ್ಯಗಳನ್ನು ಹೇಗೆ ರೂಪಿಸಬಹುದು. ಮತ್ತು ನಕಾರಾತ್ಮಕ ಶಬ್ದಗಳು ನಮ್ಮ ಮೇಲೆ ಮತ್ತು ಕುಟುಂಬದ ಇತರರ, ಅದರಲ್ಲಿಯೂ ವಿಶೇಷವಾಗಿ ಮಕ್ಕಳ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಎರಡು ಚಟುವಟಿಕೆಗಳ ಸಹಿತವಾಗಿ ವಿವರಿಸಿದರು.




ಜುಲೈ 27 ರಂದು ಶೆಟ್ಟಿಬೆಟ್ಟು ಶಾಲಾವರಣದಲ್ಲಿ ನಡೆದ ತಾಯಿ–ಮಗುವಿನ ಆರೋಗ್ಯ ತಪಾಸಣೆ ಮತ್ತು ಮಾಹಿತಿ ಕಾರ್ಯಕ್ರಮದಲ್ಲಿ ಕೆಎಂಸಿ ಮಣಿಪಾಲದ ನರ್ಸಿಂಗ್ ಕಾಲೇಜಿನ ಪ್ರಾಧ್ಯಾಪಕಿ ಡಾ. ಸುರೇಖಾ ಸಾಮಂತ್ ರವರು ಮಕ್ಕಳಿಗೆ ಮತ್ತು ತಾಯಂದಿರಿಗೆ ಸರಕಾರದಿಂದ ಪ್ರಯೋಜಿಸಲ್ಪಟ್ಟ ಯೋಜನೆಗಳು, ಆರೋಗ್ಯ ಕೇಂದ್ರದಲ್ಲಿ ದೊರೆಯುವ ಉಚಿತ ಸೌಲಭ್ಯಗಳು, ಮಕ್ಕಳ ಲಸಿಕೆಗಳು ಹಾಗೂ ಸಾಂಕ್ರಾಮಿಕ ರೋಗಗಳ ಬಗ್ಗೆ ವಿವರಿಸುತ್ತಿರುವುದು.




ಜುಲೈ 27, ಭಾನುವಾರದಂದು ಶೆಟ್ಟಿಬೆಟ್ಟು ಸರಕಾರಿ ಸಂಯುಕ್ತ ಪ್ರೌಢಶಾಲೆ ಆವರಣದಲ್ಲಿ ನಡೆದ ವನಮಹೋತ್ಸವ ಕಾರ್ಯಕ್ರಮದಲ್ಲಿ ರೊ. ಅಶೋಕ್ ನಾಯಕ್ ರವರು ಕೊಡುಗೆಯಾಗಿ ನೀಡಿದ 3 ಉತ್ತಮ ತಳಿಯ ಹಣ್ಣಿನ ಗಿಡಗಳು ಮತ್ತು ಇತರ ನೆರಳಿನಾಶ್ರಯ ನೀಡುವ ಗಿಡಗಳನ್ನು ನೆಡಲಾಯಿತು. ತೋಟಗಾರಿಕೆಯಲ್ಲಿ ಆಸಕ್ತಿ ಹೊಂದಿರುವ ಭಾಗವಹಿಸಿದವರಿಗೂ ಗಿಡಗಳನ್ನು ವಿತರಿಸಲಾಯಿತು.

ರೋಟರಿ ಐಸಿರಿಯ ಅಧ್ಯಕ್ಷ ರೊ. ಅನಿಲ್ ಕುಮಾರ್, ಕಾರ್ಯದರ್ಶಿ ರೊ. ಕೃಷ್ಣಪ್ಪ, ವಲಯ ಸೇನಾನಿ ಸ್ಮಿತಾ ಜಿ ಕಾಮತ್, ರೋಟರಿ ಜಿಲ್ಲಾ RCC ಉಪಸಭಾಪತಿ ರೊ. ಗುರುಪ್ರಸಾದ್ ಕಾಮತ್, ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈ, RCC ಐಸಿರಿ ಅಧ್ಯಕ್ಷೆ ಶ್ರೀಮತಿ ಲಕ್ಷ್ಮೀ ನಾಯ್ಕ್, ಕಾರ್ಯದರ್ಶಿ ಶ್ರೀಮತಿ ಶಾರದಾ ಹಾಗೂ ರೋಟರಿ ಐಸಿರಿ ಮತ್ತು RCC ಐಸಿರಿಯ ಸದಸ್ಯರೂ ಜೊತೆಗೂಡಿದರು.

## ಅಕಾಡೆಮಿ ಶಾಲೆಯ ವಿದ್ಯಾರ್ಥಿಗಳಿಗೆ ಪುಸ್ತಕ, ಸಾಮಗ್ರಿ ವಿತರಣೆ




ಮಣಿಪಾಲದ ಅಕಾಡೆಮಿ ಹಿರಿಯ ಪ್ರಾಥಮಿಕ ಶಾಲೆಯ ಎಲ್ಲಾ 103 ವಿದ್ಯಾರ್ಥಿಗಳಿಗೂ ರೋಟರಿ ಐಸಿರಿ ಪರ್ಕಳದ ವತಿಯಿಂದ ಸುಮಾರು ಹತ್ತು ಸಾವಿರ ರೂಪಾಯಿ ಮೌಲ್ಯದ ನೋಟ್ಸ್ ಪುಸ್ತಕಗಳು ಮತ್ತು ಲೇಖನ ಸಾಮಗ್ರಿಗಳನ್ನು ಜುಲೈ 23ರಂದು ವಿತರಿಸಲಾಯಿತು. ರೊ. ಅನಿಲ್ ಕುಮಾರ್ ಸಭಾಧ್ಯಕ್ಷತೆ ವಹಿಸಿ ಮಾತನಾಡಿ ಈ ಕೊಡುಗೆಯ ಸದ್ಬಳಕೆಗೆ ಕರೆ ನೀಡಿದರು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಲಕ್ಷ್ಮೀ ಸ್ವಾಗತಿಸಿದರು. ವಿದ್ಯಾರ್ಥಿಗಳಿಗೆ ಸಿಹಿತಿನಸನ್ನು ವಿತರಿಸಿ ಮಾತನಾಡಿದ ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈಯವರ ಹುಟ್ಟುಹಬ್ಬದ ದಿನವೇ ಕಾರ್ಯಕ್ರಮ ನಡೆದಿದ್ದು, ವಿದ್ಯಾರ್ಥಿಗಳು ಅವರಿಗೆ ಶುಭಾಶಯ ಕೋರಿದರು. ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್, ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್, "ಐಶ್ವರ್ಯ"ದ ಸಂಪಾದಕ ರೊ. ರಾಜೇಶ್ ಡಿ. ಶೆಣೈ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಬೌದ್ಧಿಕ ಸಿರಿ

ಒಂದೂರಲ್ಲಿ ಕಾಲಜ್ಞಾನಿಯೊಬ್ಬರಿದ್ದರು. ತನ್ನ ಬಳಿ ಬಂದವರ ಸಮಸ್ಯೆಗಳಿಗೆ ಪರಿಹಾರ ಕೊಡುತ್ತಾ ಅವಶ್ಯವಿದ್ದಾಗಲೆಲ್ಲಾ ಭವಿಷ್ಯ ನುಡಿಯುತ್ತಿದ್ದರು.

ಈ ಕಾಲಜ್ಞಾನಿಗೆ ಸಿಗುತ್ತಿರುವ ಗೌರವಾದರಗಳನ್ನು ನೋಡಿದ ಒಬ್ಬ ಹುಂಬ, ಈತನನ್ನು ತಾನು ಸೋಲಿಸಿಬಿಟ್ಟರೆ, ತಾನೇ ಆ ಸ್ಥಾನದಲ್ಲಿ ಮೆರೆಯಬಹುದು ಅಂದುಕೊಂಡ.

ಅಂತೆಯೇ, ಕಾಲಜ್ಞಾನಿಯನ್ನು ಸೋಲಿಸಲು ಒಂದು ಉಪಾಯ ಮಾಡಿದ ಈತ, ಒಂದು ದಿನ ತನ್ನ ಮುಷ್ಠಿಯಲ್ಲಿ ಒಂದು ನೊಣವನ್ನು ಹಿಡಿದುಕೊಂಡು, ಕೈಗಳನ್ನು ಬೆನ್ನ ಹಿಂದೆ ಹಿಡಿದುಕೊಂಡು ಕಾಲಜ್ಞಾನಿ ಬಳಿಗೆ ಹೋದ.

ಕಾಲಜ್ಞಾನಿಗೆ ಸವಾಲು ಎಸೆಯುವ ರೀತಿಯಲ್ಲಿ ತನ್ನ ಕೈಮುಷ್ಟಿಯೊಳಗೆ ಏನಿದೆ ಎಂದು ಕೇಳಿದ.

ನಿನ್ನ ಕೈಯ ಮುಷ್ಟಿಯೊಳಗಿರುವುದು ನೊಣ ಎಂದು ಕಾಲಜ್ಞಾನಿಯೂ ಉತ್ತರಿಸಿದರು.

ತಾವು ಹೇಳಿದ್ದು ಸರಿ. ಆದರೆ ಆ ನೊಣ ಜೀವಂತ ಇದೆಯೋ ಸತ್ತಿದೆಯೋ ಹೇಳಿ ನೋಡೋಣ ಎಂದು ಕಪಟ ಯೋಚನೆಯೊಂದಿಗೆ ಬಂದ ಹುಂಬನು ಪುನಃ ಕಾಲಜ್ಞಾನಿಗೆ ಕೇಳಿದ.

ಈ ಬಾರಿ ಅಂತೂ ಖಂಡಿತವಾಗಿಯೂ ಕಾಲಜ್ಞಾನಿಯು ಸೋತು ಬಿಡುತ್ತಾನೆ ಎನ್ನುವ ಭಂಡ ಧೈರ್ಯವು ಈ ಉಂಬನಲ್ಲಿತ್ತು.

ಏಕೆಂದರೆ ಕಾಲಜ್ಞಾನಿಯು ಒಂದು ವೇಳೆ ನೊಣವು ಜೀವಂತವಿದೆ ಎಂದರೆ ಅದನ್ನು ಮುಷ್ಟಿಯೊಳಗೇ ಹಿಸುಕಿಹಾಕಿ ಸಾಯಿಸುವುದು, ಸತ್ತಿದೆ ಎಂದು ಹೇಳಿದಲ್ಲಿ ಅದನ್ನು ಹಾಗೆ ಹಾರಿಬಿಟ್ಟು ಕೇಕೆ ಹಾಕುವ ಉದ್ದೇಶ ಈ ಹುಂಬನಿಗಿತ್ತು.

ಕಾಲಜ್ಞಾನಿಯು ಜಾಣ್ಮೆಯಿಂದ ಹೇಳಿದರು

**"ಆ ನೊಣದ ಭವಿಷ್ಯ ನಿನ್ನ ಕೈಯಲ್ಲಿ ಇದೆ"**

---

**ಎಲ್ಲಾ ಕಾಲದಲ್ಲೂ ಎಲ್ಲಾ ಕಡೆಗಳಲ್ಲೂ ಇಂತಹ ಪಾತ್ರಧಾರಿಗಳು ಕಾಣಸಿಗುತ್ತಾರಂತೆ !**

## ಆರೋಗ್ಯವಂತ ಶಿಶು ಸ್ಪರ್ಧೆ ಮತ್ತು ಬಹುಮಾನ ವಿತರಣೆ



ರೋಟರಿ ಐಸಿರಿ ಪರ್ಕಳ, RCC ಐಸಿರಿ, ಪ್ರಾಥಮಿಕ ಆರೋಗ್ಯ ಕೇಂದ್ರ ಹಿರೆಬೆಟ್ಟು ಹಾಗೂ ಸರಕಾರಿ ಸಂಯುಕ್ತ ಪ್ರೌಢಶಾಲೆ (ಪ್ರಾಥಮಿಕ ವಿಭಾಗ) ಶೆಟ್ಟಿಬೆಟ್ಟು ಇವರ ಜಂಟಿ ಆಶ್ರಯದಲ್ಲಿ ಜುಲೈ 27ರಂದು ಶಾಲಾವರಣದಲ್ಲಿ ಆರೋಗ್ಯವಂತ ಶಿಶು ಸ್ಪರ್ಧೆ ಜರುಗಿತು. ಆರೋಗ್ಯ ಕೇಂದ್ರದ ಆರೋಗ್ಯ ಸಹಾಯಕಿ ಶ್ರೀಮತಿ ಹರಿಣಾಕ್ಷಿಯವರು ಈ ಸ್ಪರ್ಧೆಯ ಮಾಪನಗಳನ್ನು ವಿವರಿಸಿದರು.

ಒಂದರಿಂದ ಎರಡು ವರ್ಷ ವಯಸ್ಸಿನ ವಿಜೇತರಿಗೆ ವಲಯಸೇನಾನಿ ರೊ. ಸ್ಮಿತಾ ಜಿ. ಕಾಮತ್ ಹಾಗೂ ಎರಡರಿಂದ ನಾಲ್ಕು ವರ್ಷ ವಯಸ್ಸಿನ ವಿಜೇತರಿಗೆ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ರತ್ನಾ ಕೆ. ಡಿಜಿಟಲ್ ಸ್ಲೇಟ್ ಮತ್ತು ನಗದು ಬಹುಮಾನ ವಿತರಿಸಿದರು. ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಆಟಿಕೆ ಮತ್ತು ಬಿಸ್ಕೆಟ್ ನೀಡಲಾಯಿತು.

ಆರಂಭದಲ್ಲಿ ನಿಕಟಪೂರ್ವ ಅಧ್ಯಕ್ಷ ರೊ. ಸುನೀಲ್ ಕುಮಾರ್ ಸ್ವಾಗತಿಸಿ, ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈ ಪ್ರಾಸ್ತಾವಿಕವಾಗಿ ಮಾತನಾಡಿದರು. ರೊ. ಸ್ಮಿತಾ ಜಿ. ಕಾಮತ್ ಮಕ್ಕಳ ಬೆಳವಣಿಗೆಯ ಬಗ್ಗೆ ಮಾತನಾಡಿದರು. ರೊ.ಕೃಷ್ಣಪ್ಪ ಧನ್ಯವಾದ ಸಮರ್ಪಿಸಿದರು. ರೊ. ಗುರುಪ್ರಸಾದ್ ಕಾಮತ್ ಕಾರ್ಯಕ್ರಮ ನಿರೂಪಿಸಿದರು. ನೆರೆದವರೆಲ್ಲರಿಗೂ ರೊ. ಕೆ. ಪ್ರಕಾಶ್ ಶೆಣೈಯವರ ವತಿಯಿಂದ ಉಪಹಾರ ಮತ್ತು ಮಧ್ಯಾಹ್ನದ ಊಟವನ್ನು ವಿತರಿಸಲಾಯಿತು.




ಮಂಗಳವಾರ, ಜುಲೈ 22ರಂದು ನಡೆದ ಮೂರನೇ ವಾರದ ಸಭೆಯಲ್ಲಿ "ಐಶ್ವರ್ಯ" ಸಾಪ್ತಾಹಿಕದ ಮೂರನೇ ಇ-ಸಂಚಿಕೆಯನ್ನು ಸಂಘಸೇವಾ ನಿರ್ದೇಶಕರಾದ ರೊ. ಸುನೀಲ್ ಕುಮಾರ್ ಬಿಡುಗಡೆಗೊಳಿಸಿದರು.

## ಸಂದರ್ಶನ: RCC ನೂತನ ಅಧ್ಯಕ್ಷೆ ಮತ್ತು ಕಾರ್ಯದರ್ಶಿಯವರೊಂದಿಗೆ



ನಮಸ್ತೇ. ಶ್ರೀಮತಿ ಲಕ್ಷ್ಮೀಯವರೇ, ಈಗಷ್ಟೇ ಸಮುದಾಯದಳ ಐಸಿರಿಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದೀರಿ. ಅಭಿನಂದನೆಗಳು. ಈ ಹೊಸ ಜವಾಬ್ದಾರಿಯ ಬಗ್ಗೆ ನಿಮಗೆ ಏನು ಅನ್ನಿಸುತ್ತಿದೆ ?

ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಜವಾಬ್ದಾರಿಗಳು ಹೆಚ್ಚಿರುತ್ತದೆ. ಎಲ್ಲರನ್ನು ಒಗ್ಗೂಡಿಸಿ ಹೊಂದಾಣಿಕೆಯಿಂದ ಕೆಲಸಗಳನ್ನು ನಿರ್ವಹಿಸಬೇಕು. ಪ್ರತಿಯೊಬ್ಬ ಸದಸ್ಯರ ಮಾತಿಗೂ ಬೆಲೆ ಕೊಡಬೇಕು.

ಹೌದು... ಆರ್.ಸಿ.ಸಿ. ಗೆ ಸೇರುವುದರಿಂದ ಆಗುವ ಪ್ರಯೋಜನವೇನು ?

ನಾಯಕತ್ವದ ಗುಣಗಳನ್ನು ಬೆಳೆಸಬಹುದು. ನಾಲ್ಕು ಗೋಡೆಗಳ ಮಧ್ಯೆ ಇದ್ರೆ ಜನರ ಪರಿಚಯವೂ ಕಷ್ಟ ಸಾಧ್ಯ... ಅದೇ ಒಂದು ಸಂಸ್ಥೆಯಲ್ಲಿ ಇದ್ರೆ, ಜನರ ಪರಿಚಯವಾಗಿ ಒಳ್ಳೆಯ ವಿಷಯಗಳನ್ನು ಉತ್ತಮ ರೀತಿಯಲ್ಲಿ ಗ್ರಹಿಸಲು ಸಾಧ್ಯ.

ನಿಮ್ಮ ಅಧ್ಯಕ್ಷತೆಯಲ್ಲಿ ಸಮುದಾಯಕ್ಕೆ ಏನೆಲ್ಲಾ ಮಾಡಬಹುದು ಎಂದೆಣಿಸುತ್ತದೆ?

ಅಶಕ್ತರಿಗೆ ಸಹಾಯ, ಶಾಲೆಯಿಂದ ಹಿಂದೆ ಉಳಿದ ಮಕ್ಕಳನ್ನು ಗುರುತಿಸಿ ಅವರನ್ನು ಶಾಲೆಗೆ ಸೇರಿಸುವುದು. ಹಡಿಲು ಭೂಮಿಯನ್ನು ಗುರುತಿಸಿ ವ್ಯವಸಾಯಕ್ಕೆ ಪ್ರೋತ್ಸಾಹಿಸುವುದು, ಸಮಾಜಮುಖಿ ಕಾರ್ಯಕ್ರಮಗಳನ್ನು ಏರ್ಪಡಿಸಿ ಮುಂದಿನ ಯುವ ಪೀಳಿಗೆಗೆ ಪ್ರೋತ್ಸಾಹಿಸುವುದು.

ಶ್ರೀಮತಿ ಶಾರದಾರವರೇ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸಿರುವ ನಿಮಗೂ ಅಭಿನಂದನೆಗಳು. ನಿಮಗೆ RCC ಗೆ ಸೇರುವ ಮೊದಲು RCC ಬಗ್ಗೆ ಏನನ್ನಿಸುತ್ತಿತ್ತು...?

ಆರ್.ಸಿ.ಸಿ.ಗೆ ಸೇರುವ ಮೊದಲು ಆರ್.ಸಿ.ಸಿ.ಯ ಬಗ್ಗೆ ಅಷ್ಟೇನೂ ತಿಳಿದಿರಲಿಲ್ಲ... ಒಂದು ಸಂಘಟನೆಯ ಕಲ್ಪನೆ ಇತ್ತು. ಬೇರೆ ಸಂಘ ಸಂಸ್ಥೆಗಳಂತೆ ಇದು ಒಂದು ಸಮಾಜಮುಖಿ ಕಾರ್ಯಕ್ರಮ ನಿರ್ವಹಿಸಲು ಇರುವ ಒಂದು ವೇದಿಕೆ ಎಂದು ತಿಳಿದಿತ್ತು.

RCC ಯ ಯಾವ ಕಾರ್ಯಕ್ರಮ ನಿಮಗೆ ಖುಷಿ ಕೊಡುತ್ತದೆ.?

ಆರ್.ಸಿ.ಸಿ.ಯ ಧ್ಯೇಯವಾಕ್ಯವಾದ "ನಮ್ಮ ನಡೆ ಕೃಷಿಯ ಕಡೆ" ಅನ್ನುವ ಹಾಗೆ ಆರ್.ಸಿ.ಸಿ.ಯು ಗ್ರಾಮೀಣ ಪ್ರದೇಶದಲ್ಲಿ ಹಮ್ಮಿಕೊಂಡ ಸರ್ವತೋಮುಖ ಅಭಿವೃದ್ಧಿಯ ಕೆಲಸ ಕಾರ್ಯಕ್ರಮಗಳು ತುಂಬಾ ಖುಷಿ ಕೊಡುತ್ತದೆ.... ಉದಾಹರಣೆಗಾಗಿ, ಭತ್ತ ನಾಟಿ, ಸರಕಾರೀ ಶಾಲೆಗಳಲ್ಲಿ ಮಕ್ಕಳ ಜ್ಞಾನಾರ್ಜನೆಗೆ ಉಪಯುಕ್ತವಾಗುವ ರೀತಿಯಲ್ಲಿ ಅವರ ಏಳಿಗೆಗೆ ಸಹಕರಿಸುವುದು, ಗ್ರಾಮೀಣ ಪ್ರದೇಶದ ಸಾಧಕ – ಸಾಧಕಿಯರನ್ನು ಗುರುತಿಸಿ, ಅಭಿನಂದಿಸಿ, ಪ್ರೋತ್ಸಾಹಿಸುವ ಕಾರ್ಯಕ್ರಮ... ಹೀಗೆ ಹತ್ತು ಹಲವು ಕಾರ್ಯಕ್ರಮಗಳು ಇಷ್ಟ.

ಸಮಯ ನೀಡಿದಕ್ಕಾಗಿ ನಿಮಗಿಬ್ಬರಿಗೂ ಧನ್ಯವಾದಗಳು. ನೀವಿಬ್ಬರೂ ಆರ್.ಸಿ.ಸಿ. ಬಗ್ಗೆ ತುಂಬಾ ತಿಳುವಳಿಕೆಯನ್ನು ಹೊಂದಿದವರಾಗಿದ್ದೀರಿ. ಸಮುದಾಯದ ಬಗ್ಗೆ ನಿಮಗಿರುವ ಪ್ರೀತಿ ಮತ್ತು ಕಾಳಜಿ ಪ್ರಶಂಶಾರ್ಹವಾಗಿದೆ. ನಿಮ್ಮ ಹೊಸ ಜವಾಬ್ದಾರಿಯ ಬಗ್ಗೆಯೂ ಸಾಕಷ್ಟು ಸಿದ್ಧತೆ ಮಾಡಿಕೊಂಡಿರುವುದು ಅಭಿನಂದನೀಯ. ಶುಭವಾಗಲಿ.











